71 (97)

## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6284\2014\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24/09/2018

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ಬಿ.ಪದ್ಮನಾಭ ಬಿನ್ ಲೇಟ್.ಹೆಚ್.ಎಸ್.ಬಾಲಕೃಷ್ಣ ಮೂರ್ತಿ, #152, ವಿನಾಯಕ ರಸ್ತೆ, ಕೆ.ಎನ್.ಪುರ ಬಡಾವಣೆ, ಮೈಸೂರು ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಕೆ.ಎನ್.ಪುರ ಬಡಾವಣೆ, ವಿನಾಯಕ ರಸ್ತೆ, #152ರ ನಿವಾಸಿಯಾದ ಶ್ರೀ.ಬಿ.ಪದ್ಮನಾಭ ಬಿನ್ ಲೇಟ್.ಹೆಚ್.ಎಸ್.ಬಾಲಕೃಷ್ಣ ಮೂರ್ತಿ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಕೆ.ಎನ್.ಪುರ ಬಡಾವಣೆ ಹರಿಶ್ಚಂದ್ರ ರಸ್ತೆ ನಿವಾಸಿಯಾದ ವಾರ್ಡ್ ನಂ.60ರ ಕಾರ್ಪೋರೇಟರ್ ಆದ ಶ್ರೀ.ಹೆಚ್.ಎನ್.ಶ್ರೀಕಂಠಯ್ಯ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಭ್ರಷ್ಟಚಾರದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಬಿಎಸ್‌ಯುಪಿ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಸರ್ಕಾರದ ವತಿಯಿಂದ ಮಾದರಿ-1ರಲ್ಲಿ ₹2,04,700/- ಮತ್ತು ಮಾದರಿ-2ರಲ್ಲಿ ₹1,85,000/-ಗಳು ಫಲಾನುಭವಿಗಳಿಗೆ ಮಂಜೂರಾಗಿದ್ದು, ಪೂರ್ಣ ಪ್ರಮಾಣದ ಕಾಮಗಾರಿಯನ್ನು ನಡೆಸದೇ, ಪ್ರತಿ ಫಲಾನುಭವಿಗಳಿಂದ ₹30,000/- ದಿಂದ ₹50,000/-ಗಳನ್ನು ಪಡೆದು ಕಾಮಗಾರಿಯನ್ನು ಮಾಡಿದ್ದಾರೆ. ಆದರೆ, ನಗರಪಾಲಿಕೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆಗೆ ₹10,000/- ಮಾತ್ರ ತಲುಪಿದೆ, ಉಳಿದ ಹಣ ಇಂಡಿಯನ್ ಬ್ಯಾಂಕ್, ಉದಯಗಿರಿ ಶಾಖೆಯಲ್ಲಿರುವ ಎದುರುದಾರರ ಬ್ಯಾಂಕ್ ಖಾತೆಗೆ ಜಮಾ ಆಗಿದೆ. ತಾವು ಎದುರುದಾರರ ಬ್ಯಾಂಕ್ ಖಾತೆಗೆ ಹಣವನ್ನು ಕಟ್ಟದಿದ್ದ ಕಾರಣ, ತಮ್ಮ ಮನೆಯ ಕಾಮಗಾರಿಯನ್ನು ಉದ್ದೇಶಪೂರ್ವಕವಾಗಿ ನಿಲ್ಲಿಸಿದ್ದಾರೆ. ಇದೇ ರೀತಿ, ವಾಜಪೇಯಿ ಯೋಜನೆ ಮತ್ತು ಗೃಹ ಭಾಗ್ಯದ ಅನುದಾನದ ಹಣದಲ್ಲೂ ಕೂಡ ಅವ್ಯವಹಾರ ನಡೆದಿದೆ. ನಗರಪಾಲಿಕೆ ಸದಸ್ಯರಾಗಿರುವ ಎದುರುದಾರರು ಈ ಎಲ್ಲಾ ಕಾಮಗಾರಿಗಳನ್ನು ನಡೆಸುತ್ತಿದ್ದಾರೆಂದು ಹೇಳಿದ್ದಾರೆ.

N. [signature]

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರಿನ ಅಂಶಗಳನ್ನು ಅಲ್ಲಗಳೆದು, ತಾವು ಸಾರ್ವಜನಿಕರಿಗೋಸ್ಕರ ನಿಗದಿತ ಅವಧಿಯಲ್ಲಿ ಸೇವೆ ನೀಡಿರುವುದರಿಂದ, ಕಳೆದ 20 ವರ್ಷಗಳಿಂದ (ಒಂದು ಅವಧಿ ಹೊರತುಪಡಿಸಿ) ತಾವು ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆಗಿ ಚುನಾಯಿತರಾಗಿದ್ದು, ಕೆ.ಎನ್.ಪುರ ಪ್ರದೇಶವು ಮುಡಾ ವ್ಯಾಪ್ತಿಗೆ ಬರುವುದಿಲ್ಲ. 1999–2000ನೇ ಅವಧಿಯಲ್ಲಿ ತಾವು ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಆಗಿ ಆಯ್ಕೆಯಾಗಿದ್ದು, 2013ನೇ ಸಾಲಿನ ಚುನಾವಣೆಯಲ್ಲಿ ದೂರುದಾರರು ತಮ್ಮ ವಿರುದ್ಧ ಸ್ಪರ್ಧಿಸಿ ಸೋತಿರುವ ಕಾರಣ ಹಾಗೂ ತಮ್ಮ ಜನಪ್ರಿಯತೆಯನ್ನು ಕುಗ್ಗಿಸುವ ಉದ್ದೇಶದಿಂದ ಮತ್ತು ದ್ವೇಷದಿಂದ ಸದರಿ ದೂರನ್ನು ಸಲ್ಲಿಸಿದ್ದಾರೆ. ದೂರಿನಲ್ಲಿ ಹೇಳಿದ ಯೋಜನೆಗಳಡಿಯಲ್ಲಿ ಸರ್ಕಾರದಿಂದ ಬಿಡುಗಡೆಯಾಗುವ ಹಣಕ್ಕೂ, ಮಹಾನಗರ ಪಾಲಿಕೆಯ ಸದಸ್ಯರಿಗೂ ಯಾವುದೇ ಸಂಬಂಧವಿಲ್ಲ. ದೂರುದಾರರು ತಮ್ಮ ವಿರುದ್ಧ ಸುಳ್ಳು ಆಪಾದನೆಗಳನ್ನು ಮಾಡಿದ್ದಾರೆಂದು ಹೇಳಿದ್ದಾರೆ.

4. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಈ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ಆದೇಶಿಸಲಾಗಿ, ಉಪ ನಿಯಂತ್ರಕರು, ಲೆಕ್ಕ ಪತ್ರ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ, ಎದುರುದಾರರು ಮಹಾನಗರ ಪಾಲಿಕೆ ವಾರ್ಡ್ ನಂ.60ರ ಚುನಾಯಿತ ಪ್ರತಿನಿಧಿಯಾಗಿದ್ದು, ಅವರ ವಾರ್ಡ್‌ನ ಕೆಲವು ಬಿಎಸ್‌ಯುಪಿ ಫಲಾನುಭವಿಗಳ ಬ್ಯಾಂಕ್ ಖಾತೆಯಿಂದ ನೇರವಾಗಿ, ಅವರ ಖಾತೆಗೆ ಹಣವನ್ನು ವರ್ಗಾವಣೆ ಮಾಡಿಕೊಂಡಿದ್ದಾರೆ. ಆದ್ದರಿಂದ, ಅವರು ಅವ್ಯವಹಾರ ಮಾಡಿರುವುದು ತನಿಖೆಯಲ್ಲಿ ಸಾಬೀತಾಗಿದೆಯೆಂದು ಹೇಳಿದ್ದಾರೆ.

5. ತನಿಖಾ ವರದಿಗೆ ಎದುರುದಾರರಿಂದ ಉತ್ತರವನ್ನು ಕೇಳಲಾಗಿ, ಸದರಿಯವರು ಉತ್ತರವನ್ನು ಸಲ್ಲಿಸಿಲ್ಲ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ನಂ.60ರಲ್ಲಿ ಬಿಎಸ್‌ಯುಪಿ ಯೋಜನೆಯ ಪ್ಯಾಕೇಜ್–3ರಡಿಯಲ್ಲಿ ಒಟ್ಟು 104 ಮನೆಗಳನ್ನು ನಿರ್ಮಿಸಲಾಗಿದ್ದು, ಸದರಿ ಕಾಮಗಾರಿಯು 2010 ರಿಂದ ಪ್ರಾರಂಭಗೊಂಡಿವೆಯೆಂದು ಮೈಸೂರು ಮಹಾನಗರ ಪಾಲಿಕೆಯ ಉಪ ಆಯುಕ್ತರು

N. Anand

70 MYS/6284/14

(ಆಡಳಿತ) ರವರು ತನಿಖಾಧಿಕಾರಿಗಳಿಗೆ ನೀಡಿದ ಪತ್ರ ಸಂ:ಮೈನಪಾ\ಕಾಅ\ಸಕಾಇ\ನರ್ಮ್\ 2015–16\99 ದಿನಾಂಕ:06/02/16ರ ಮಾಹಿತಿ ಪತ್ರದಲ್ಲಿ ಕಂಡು ಬಂದಿದೆ;

2) ಶ್ರೀಮತಿ.ನಾಗಮ್ಮ ಕೋಂ ನಾಗರಾಜ್, ಶ್ರೀಮತಿ.ಕನ್ನಿಕಾ ಮೇರಿ, ಶ್ರೀ.ಶಿವಮಲ್ಲೇಗೌಡ ಮತ್ತು ಶ್ರೀ.ಕಲೀಂಬೇಗ್ ರವರ ಬ್ಯಾಂಕ್ ಪಾಸ್ ಪುಸ್ತಕಗಳನ್ವಯ ಶ್ರೀಮತಿ.ನಾಗಮ್ಮ ಕೋಂ ನಾಗರಾಜ್ ರವರ ಬಾಬ್ತು ಉದಯಗಿರಿ ವಿಸ್ತರಣಾ ಶಾಖೆ, ಇಂಡಿಯನ್ ಬ್ಯಾಂಕ್ ಖಾತೆ ಸಂ:930915919 ರಿಂದ ದಿ:04/05/12ರಂದು ಸದರಿ ಖಾತೆಯಿಂದ ಎದುರುದಾರರ ಬಾಬ್ತು ಖಾತೆ ಸಂಖ್ಯೆ:00511530368ಗೆ ₹15,000/–, ಶ್ರೀ.ಶಿವಮಲ್ಲೇಗೌಡ ರವರ ಬಾಬ್ತು ಉದಯಗಿರಿ ವಿಸ್ತರಣಾ ಶಾಖೆ, ಇಂಡಿಯನ್ ಬ್ಯಾಂಕ್ ಖಾತೆ ಸಂ:6040697577 ರಿಂದ ದಿ:19/07/12ರಂದು ಸದರಿ ಖಾತೆಯಿಂದ ಎದುರುದಾರರ ಬಾಬ್ತು ಖಾತೆ ಸಂಖ್ಯೆ:00511530368ಗೆ ₹29,000/– ಮತ್ತು ಶ್ರೀ.ಕಲೀಂಬೇಗ್ ರವರ ಬಾಬ್ತು ಇಂಡಿಯನ್ ಬ್ಯಾಂಕ್ ಖಾತೆಯಿಂದ ದಿ:05/05/12 ಮತ್ತು 02/07/12 ರಂದು ಎದುರುದಾರರ ಬಾಬ್ತು ಖಾತೆ ಸಂಖ್ಯೆ:00511530368ಗೆ ಒಟ್ಟು ₹80,000/– ವರ್ಗಾವಣೆಯಾಗಿರುವುದು ಪಾಸ್ ಪಾಸ ಪುಸ್ತಕದ ಪ್ರತಿಗಳಲ್ಲಿ ಕಂಡು ಬಂದಿದೆ. ಸದರಿ ಶ್ರೀಮತಿ.ನಾಗಮ್ಮ, ಶ್ರೀ.ಶಿವಮಲ್ಲೇಗೌಡ ಮತ್ತು ಶ್ರೀ.ಕಲೀಂಬೇಗ್ ರವರ ಪೈಕಿ ಶ್ರೀಮತಿ.ನಾಗಮ್ಮ ಮತ್ತು ಶ್ರೀ.ಶಿವಮಲ್ಲೇಗೌಡ ರವರ ಹೆಸರು ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:60ರ ಬಿಎಸ್‌ಯುಪಿ ಯೋಜನೆಯ ಫಲಾನುಭವಿಗಳ ಪಟ್ಟಿಯಲ್ಲಿ ಕ್ರಮವಾಗಿ, ಕ್ರಮ ಸಂಖ್ಯೆ:23 ಮತ್ತು 41ರಲ್ಲಿ ಕಂಡು ಬಂದಿದೆ. ಶ್ರೀಮತಿ.ನಾಗಮ್ಮ, ಶ್ರೀ.ಶಿವಮಲ್ಲೇಗೌಡ ಮತ್ತು ಶ್ರೀ.ಕಲೀಂಬೇಗ್ ರವರುಗಳಿಗೆ ಎದುರುದಾರರು ನೀಡಿದ್ದಾರೆನ್ನಲಾದ ಕೈಸಾಲದ ಹಣವನ್ನು ಫಲಾನುಭವಿಗಳು ತಮ್ಮ ಖಾತೆಗೆ ಜಮಾ ಮಾಡಿದ್ದಾರೆಂದು ಎದುರುದಾರರು ಪ್ರತಿಪಾದಿಸಿದ್ದು, ಸದರಿಯವರುಗಳಿಗೆ ಎದುರುದಾರರು ಸಾಲ ನೀಡಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಆದ್ದರಿಂದ, ಸದರಿ ವರ್ಗಾವಣೆಯಾದ ಹಣ ₹1,24,000/– ಅವ್ಯವಹಾರದ ಹಣ ವರ್ಗಾವಣೆಯಾಗುವ ಸಮಯಕ್ಕೆ ಎದುರುದಾರರು ಮೈಸೂರು ಮಹಾನಗರ ಪಾಲಿಕೆಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಸದರಿಯವರು ಈಗಲೂ ಸಹ ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:60ರ ಸದಸ್ಯರಾಗಿದ್ದಾರೆ.

7. ಆದ್ದರಿಂದ, ಎದುರುದಾರರು ಸಾರ್ವಜನಿಕ ನೌಕರರಾಗಿ ಕಾನೂನು ಉಲ್ಲಂಘಿಸಿ, ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಸದರಿಯವರ ಪಾಲಿಕೆಯ ಸದಸ್ಯತ್ವವನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯಿದೆ ಅಡಿ ಅನರ್ಹಗೊಳಿಸಲು ಮತ್ತು ಭ್ರಷ್ಟಾಚಾರ ಪ್ರತಿಬಂಧ ಕಾಯಿದೆ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

N. [signature]

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anande

(ನ್ಯಾಯಾಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**